- -                                   ಓ ಎಸ್ ನಂ . 31/2021

ಡಿ .ಡಬ್ಲ್ಯೂ :1

ದಿನಾಂಕ :02-04-2025 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

ಪಾಟೀ ಸವಾಲುಃ ವಾದಿಗಳ ಪರ ವಕೀಲರಿಂದಃ

ನಾನು ವ್ಯವಹಾರ ಮಾಡುತ್ತೇನೆ . ಪ್ರಸ್ತುತ ನಾನು ಅಮ್ಮನಘಟ್ಟ ಗ್ರಾಮದ ಸದಸ್ಯನಾಗಿದ್ದೇನೆ ಎಂದರೆ ಸರಿ .

ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವ ಚಿಕ್ಕಈರಮ್ಮ ಮತ್ತು ಇತರರು ಯಾವ ಊರಿನಲ್ಲಿ ವಾಸವಿದ್ದಾರೆ ಎಂದರೆ ಸಾಕ್ಷಿಯು ಅವರ ವಿಳಾಸದ ಬಗ್ಗೆ ಮಾಹಿತಿ ಇಲ್ಲ, ಅವರು ಜೀವಂತವಾಗಿದ್ದಾರೆ ಎಂದು ಉತ್ತರಿಸಿದ್ದಾರೆ . ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವ ಲಿಂಗಪ್ಪ ನನ್ನ ಮುತ್ತಾತ ಎಂದರೆ ಸರಿ . ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವ ಹುಚ್ಚಣ್ಣ ವಾದಿಯ ತಂದೆ ಎಂದರೆ ನನಗೆ ಗೊತ್ತಿಲ್ಲ . ನನ್ನ ತಾತನಿಗೆ ಎಷ್ಟು ಗಂಡು ಮಕ್ಕಳು ಎಂದು ಗೊತ್ತಿಲ್ಲ . ವಾದಿಯು ನನ್ನ ಮುತ್ತಾತನ ತಮ್ಮ ಹುಚ್ಚಣ್ಣ ರವರ ಮಗಳು ಎಂದರೆ ಸರಿಯಲ್ಲ . ಲಿಂಗಪ್ಪ ಮತ್ತು ಹುಚ್ಚಣ್ಣ ರವರು ಸ್ವತ್ತುಗಳನ್ನು ವಿಭಾಗಿಸಿಕೊಂಡಿದ್ದಾರೆ ಎಂದು ತೋರಿಸಲು ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ನನಗೆ ಗೊತ್ತಿಲ್ಲ ಎಂದು ಸಾಕ್ಷಿ ಹೇಳಿದ್ದಾರೆ . 1 ನೇ ಪ್ರತಿವಾದಿಯ ನನ್ನ ತಾತನ ಹಿರಿಯ ಮಗ ಎಂದರೆ ಸರಿ . ನನ್ನ ಮುತ್ತಾತಂದಿರಾದ ಲಿಂಗಪ್ಪ, ಹುಚ್ಚಣ್ಣ ಮತ್ತು ನಂಜುಡಯ್ಯ ರವರು ಮರಣ ಹೊಂದಿದ್ದಾರೆ ಎಂದರೆ ಸರಿ . ಸದರಿ ಮೂವರ ಕುಟುಂಬಕ್ಕೂ 1 ನೇ ಪ್ರತಿವಾದಿಯೇ ಹಿರಿಯ ಮಗನಾಗಿದ್ದರು ಎಂದರೆ ಸರಿ . ದಾವಾ ಸ್ವತ್ತುಗಳು ಎಲ್ಲವೂ 1 ನೇ ಪ್ರತಿವಾದಿಯ ಹೆಸರಿನಲ್ಲಿವೇ ಎಂದರೆ ಸರಿ . ಕೆಲವು ಸ್ವತ್ತುಗಳನ್ನು ಒಟ್ಟು ಕುಟುಂಬದಲ್ಲಿದ್ದಾಗಲೇ 1 ನೇ ಪ್ರತಿವಾದಿಯೂ ಖರೀದಿಸಿದ್ದಾರೆ ಎಂದರೆ ಸರಿ , ಅವರು ವ್ಯಾಪಾರ ಮಾಡುತ್ತಿದ್ದರು ಆದುದರಿಂದ ಖರೀದಿಸಿದ್ದಾರೆ ಎಂದು ತಿಳಿಸಿದ್ದಾರೆ . ಏನು ವ್ಯಾಪಾರ ಮಾಡುತ್ತಿದ್ದರು ಎಂದರೆ ಹಸುಗಳು , ಎತ್ತುಗಳು ಮತ್ತು ಎತ್ತಿನ ಗಾಡಿಗಳನ್ನು ಖರೀದಿ ಮಾಡಿ ವ್ಯಾಪಾರ ಮಾಡುತ್ತಿದ್ದರು ಎಂದು ತಿಳಿಸಿದ್ದಾರೆ . ಒಟ್ಟು ಕುಟುಂಬದ ಆದಾಯದಿಂದಲೇ ಅವರು ವ್ಯಾಪಾರ ಮಾಡುತ್ತಿದ್ದರು ಎಂದರೆ ಸರಿಯಲ್ಲ . 2000 ನೇ ಸಾಲಿನವರೆಗೂ ಯಾವುದೇ ವಿಭಾಗ ಮಾಡಿಕೊಂಡಿರಲಿಲ್ಲ ಎಂದರೆ ಸರಿ .

(ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓದಿ ಹೇಳಿ, ಕೇಳಿದೆ, ಸರಿ ಇದೆ, ಎಂದರು.

SD/-
(ಅನುಪಮ.ಡಿ. )
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ, ಗುಬ್ಬಿ .